
ನವಸಾಕ್ಷರ ಪುಸ್ತಕ ಮಾಲೆ ೪೯

ಕ್ಯಾನ್ಸರ್

ಡಾ|| ನಾಗಲೋಟಿ ಮಠ



374
NAG

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ಗ್ರಂಥಾಲಯ

...ಲೆ

...ಯ

... ಎಸ್.
...ನಾಲಯ

...ರು

ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಟಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಟಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೪೯

ಕ್ಯಾನ್ಸರ್

ಡಾ॥ ನಾಗಲೋಟಿ ಮಠ

AKSHARA GRANTHALAYA
ACC.NO. 016143

ಮಾತೆಂಬುದು ಜ್ಯೋತಿರ್ಲಿಂಗ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

016143

CANCER : By Dr. Nagalotimata. Published by The Director of Prasaranga,
Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

© Kannada University 1994

374
NAG

ಸಂಯೋಜನಾಧಿಕಾರಿ
ಡಾ|| ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
3/3, ಮೊದಲನೇ ಮುಖ್ಯರಸ್ತೆ, ಹೊಸ ತರಗುಪೇಟೆ,
ಬೆಂಗಳೂರು-೫೬೦ ೦೦೨.

ದಾ—೯೯
ತಂಡ 2

ಕ್ಯಾನ್ಸರ್

ಕ್ಯಾನ್ಸರ್ ಅಂದರೇನು?

'ಕ್ಯಾನ್ಸರ್' ಎಂಬ ಶಬ್ದವನ್ನು ಬಹುಶಃ ಎಲ್ಲರೂ ಕೇಳಿರಲಿಕ್ಕೆ ಸಾಕು. ಈ ಶಬ್ದವು ಎಂಥವರನ್ನೂ ನಡುಗಿಸುತ್ತದೆ. ಇದೊಂದು ಅತೀ ಮಾರಕ ಬೇನೆ. ಇದರ ಫಲಿತಾಂಶ ಮರಣ. ಆದ್ದರಿಂದ ಹಳ್ಳಿಗರು ಈ ರೋಗವನ್ನು "ಕ್ಯಾನ್ಸಲ್" ರೋಗವೆಂದು ಅನ್ನುವರು. ಅವರು ಇಂಥವನಿಗೆ "ಕ್ಯಾನ್ಸರ್" ಆಗಿದೆ ಎಂದು ಹೇಳದೆ "ಕ್ಯಾನ್ಸಲ್" ಆಗಿದೆ ಎಂದೇ ಹೇಳುವರು. ಜೀವನದಿಂದ ಆ ವ್ಯಕ್ತಿ ಕ್ಯಾನ್ಸಲ್ ಆಗುವನೆಂದೇ ಅವರ ಅರ್ಥ. ಇಲ್ಲವೇ ಆ ವ್ಯಕ್ತಿಯು ಈ ಜಗತ್ತಿನಿಂದ ಕ್ಯಾನ್ಸಲ್ ಆಗುತ್ತಾನೆಂದು ಅರ್ಥ.

'ಕ್ಯಾನ್ಸರ್' ಶಬ್ದವು ಲ್ಯಾಟಿನ್ ಭಾಷೆಯಿಂದ ಬಂದಿದೆ. ಅದರ ಸರಳ ಅರ್ಥ 'ಏಡಿ' ಅಥವಾ 'ಕರ್ಕ' ಎಂದು. ಆದ್ದರಿಂದ, 'ಕ್ಯಾನ್ಸರ್' ರೋಗವನ್ನು "ಕರ್ಕಹುಣ್ಣು" "ಕರ್ಕರೋಗ", "ಏಡಿಗಂತಿ" ಎಂದು ಭಾಷಾಂತರಿಸುತ್ತಾರೆ. ಸಂಸ್ಕೃತದಲ್ಲಿ ಈ ರೋಗವನ್ನು 'ಅರ್ಬುದ ಗಂತಿ' ಎನ್ನುವರು. ಚರಕ, ಶುಶ್ರುತ ಸಂಹಿತೆಗಳಲ್ಲೂ ಈ ರೋಗದ ಬಗ್ಗೆ ಬರೆದಿರುವರು. ಅನೇಕ ವರ್ಷಗಳಿಂದ ಎಷ್ಟೋ ಜನರು ಈ ರೋಗದಿಂದ ಮರಣ ಹೊಂದಿರುವರು. ಇಂದಿಗೂ ಮರಣ ಹೊಂದುತ್ತಿರುವರು.

ಈ ರೋಗಕ್ಕೆ ಏಡಿಯ ಹೆಸರೇಕೆ?

'ಕ್ಯಾನ್ಸರ್' ಮಾರಕ ರೋಗಕ್ಕೆ ಒಂದು ಸಣ್ಣ ಜೀವಿಯ ಹೆಸರನ್ನೇಕೆ ಇಟ್ಟರು? ಎಂಬ ಸಂಶಯ ಎಲ್ಲರಿಗೂ ಬರಬಹುದು. ಈ ಹೆಸರನ್ನು ಇಡಲು ಕೆಲವು ಕಾರಣಗಳಿವೆ. ಏಡಿಯ ದೇಹವು ಚಿಕ್ಕದು. ಅಂಗಾಂಗಗಳು ಬಹು ಉದ್ದವಾಗಿರುತ್ತವೆ. ಏಡಿಯ ಕೊಂಡಿಯು ಬಹು ಬಿಗಿಯಾಗಿ ಹಿಡಿಯುತ್ತವೆ. ಇದೇ ಮಾದರಿಯಲ್ಲಿ ಕ್ಯಾನ್ಸರ್ ಗಂಟು ಸಣ್ಣಗಿರುತ್ತದೆ. ಆದರೆ ಅದರಿಂದ ಹೊರಟ ಬೇರುಗಳು ಬಹುದೂರ ದೂರದವರೆಗೆ ಹೋಗುತ್ತವೆ. ಕ್ಯಾನ್ಸರ್ ಒಂದು ದೇಹದ ಭಾಗವನ್ನು ಹಿಡಿದರೆ ಅದನ್ನು ಬಿಡುವುದೇ ಇಲ್ಲ. ಇದನ್ನು ಏಡಿಯ ಹಿಡಿತ ಎನ್ನುವರು. ಏಡಿಯನ್ನು ಹಿಡಿಯಲು ಹೋದಂತೆ ಅದು ಭೂಮಿಯಲ್ಲಿ ಹುಗಿದುಕೊಳ್ಳುತ್ತಲೇ ಹೋಗುವದು. ಅದೇ ತರಹ ಕ್ಯಾನ್ಸರ್ ಹುಣ್ಣು ದೇಹದಲ್ಲಿ ಆಳವಾಗಿ ಹುಗಿದುಕೊಳ್ಳುತ್ತಲೇ ಹೋಗುವದು. ಏಡಿಯು ಯಾವುದೇ ದಿಕ್ಕಿಗೆ ಅಂದರೆ ಎಂಟೂ ದಿಕ್ಕುಗಳಲ್ಲಿ ಸುಲಭವಾಗಿ ಚಲಿಸುವದು. ಕ್ಯಾನ್ಸರ್ ಹುಣ್ಣು ಸಹ ದೇಹದ ಯಾವುದೇ ದಿಕ್ಕಿಗೆ ಚಲಿಸುವುದು. ಆದ್ದರಿಂದಲೇ ಇದನ್ನು ಕರ್ಕರೋಗವೆಂದೂ, ಏಡಿಗಂತಿ ಎಂದೂ ಕರೆಯುವರು.

ಕ್ಯಾನ್ಸರ್ ರೋಗವು ಕೇವಲ ಮಾನವರಲ್ಲಿ ಮಾತ್ರವೇ ?

ಕ್ಯಾನ್ಸರ್ ರೋಗವು ಮಾನವನಿಗೆ ಮಾತ್ರ ಸೀಮಿತವಾಗಿಲ್ಲ. ಇಲಿ, ಮೊಲ, ಗಿನಿಹಂದಿ, ಆಡು, ಕುರಿ, ದನ, ಪಕ್ಷಿಗಳು ಸಹ ಕ್ಯಾನ್ಸರ್ ರೋಗದಿಂದ ಬಳಲಿ ಮರಣ ಹೊಂದುವವು. ಅರಣ್ಯದಲ್ಲಿಯ ಪಶುಗಳಿಗೂ ಈ ರೋಗ ತಗಲುತ್ತದೆ. ಕ್ಯಾನ್ಸರ್ ರೋಗವು ಗಿಡ-ಮರಗಳಿಗೂ ತಗಲುತ್ತದೆ. ಅವು ಸಹ ಮಾನವನಂತೆ ಮರಣ ಹೊಂದುವವು. ಒಂದೊಂದು ಜಾತಿಯ ಜೀವಿಗಳಲ್ಲಿ ಕ್ಯಾನ್ಸರ್ ಒಂದೊಂದು ರೂಪದಲ್ಲಿ ಮೂಡಬಹುದು.

ಯಾವ ವಯಸ್ಸಿನವರಿಗೆ ಕ್ಯಾನ್ಸರ್ ಹೆಚ್ಚು ?

ಕ್ಯಾನ್ಸರ್ ಬೇನೆ ಇಂಥ ವಯಸ್ಸಿನವರಿಗೆ ಮಾತ್ರ ಎಂದು ಹೇಳಲಾಗುವುದಿಲ್ಲ. ಒಂದೊಂದು ವಯಸ್ಸಿಗೆ ಒಂದೊಂದು ಪ್ರಕಾರದ ಕ್ಯಾನ್ಸರ್ ಕಾಣುವವು. ಮಕ್ಕಳಿಗೆ ರಕ್ತದ

ಕ್ಯಾನ್ಸರ್, ಕಣ್ಣಿನ ಕ್ಯಾನ್ಸರ್ ಹೆಚ್ಚಿ ಹರೆಯದವರಲ್ಲಿ ಎಲುವಿನ ಕ್ಯಾನ್ಸರ್, ಹಾಲುರಸಗ್ರಂಥಿ ಕ್ಯಾನ್ಸರ್ ಮುಂತಾದವು. ಮುದಿ ವಯಸ್ಸಿನಲ್ಲಿ ಎಲ್ಲ ರೀತಿಯವೂ ಬರುತ್ತವೆ. ಆದ್ದರಿಂದ ವಯಸ್ಸಿಗೂ ಕ್ಯಾನ್ಸರಿಗೂ ಸಂಬಂಧವಿಲ್ಲ.

ಕ್ಯಾನ್ಸರ್ ಪುರುಷರಿಗೆ ಹೆಚ್ಚೋ ಅಥವಾ ಸ್ತ್ರೀಯರಿಗೋ?

ಕ್ಯಾನ್ಸರ್ ವ್ಯಕ್ತಿಯ ಲಿಂಗವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ವ್ಯಕ್ತಿ ಗಂಡಿರಲಿ ಅಥವಾ ಹೆಣ್ಣಿರಲಿ ಕ್ಯಾನ್ಸರ್ ಇಬ್ಬರನ್ನೂ ಹಿಡಿಯುವುದು. ಪುರುಷರಲ್ಲಿ ಒಂದು ಪ್ರಕಾರದ ಕ್ಯಾನ್ಸರ್ ಕಂಡರೆ, ಸ್ತ್ರೀಯರಲ್ಲಿ ಬೇರೆ ಪ್ರಕಾರದ ಕ್ಯಾನ್ಸರ್ ಪೀಡಿಸುವವು.

ಕ್ಯಾನ್ಸರ್ ರೋಗದಲ್ಲಿ ನಡೆಯುವದಾದರೂ ಏನು?

ಕ್ಯಾನ್ಸರ್ ರೋಗದಲ್ಲಿ ದೇಹದಲ್ಲಿಯ ಕೆಲವು ಜೀವಕಣಗಳು ತಮ್ಮ ಮೇಲಿನ ನಿಯಂತ್ರಣವನ್ನು ಕಳೆದುಕೊಂಡು ಅತಿಯಾಗಿ ಬೆಳೆಯ ತೊಡಗುತ್ತವೆ. ಬೆಳೆಯುವಾಗ ನಿಯಮದಂತೆ ಶಿಸ್ತಿನಿಂದ ಹೊಂದಿಕೊಂಡು ಸುತ್ತಲಿನ ಜೀವಕಣಗಳಿಗೆ ಹಾನಿ ಆಗದಂತೆ ಬೆಳೆಯುವುದಿಲ್ಲ. ಹುಚ್ಚುಹುಚ್ಚಾಗಿ ಬೆಳೆಯುತ್ತವೆ. ಗಂಟುಕಟ್ಟುತ್ತವೆ. ಸುತ್ತಲಿನ ತಮ್ಮ ದಾರಿಯಲ್ಲಿ ಬರುವ ಸಾಮಾನ್ಯ ಜೀವಕಣಗಳನ್ನು ನಾಶಮಾಡುತ್ತವೆ. ತಮಗೆ ಪೋಷಣೆ ನೀಡುವ ರಕ್ತವಾಹಿನಿಗಳನ್ನು ಹರಿಯುತ್ತವೆ. ಇಲ್ಲವೇ ಬಂದು ಮಾಡುತ್ತವೆ. ಇದರಿಂದ ಅಸಂಖ್ಯ ಇತರ ಸಾಮಾನ್ಯ ಜೀವಕಣಗಳನ್ನೂ ನಾಶಪಡಿಸುತ್ತವೆ. ಹಾಗು ತಾವೂ ದೊಡ್ಡ ಸಂಖ್ಯೆಯಲ್ಲಿ ಮರಣ ಹೊಂದುತ್ತವೆ. ದೇಹದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ರಕ್ತದ ಮೂಲಕ, ಹಾಲುರಸ ವಾಹಿನಿಗಳ ಮೂಲಕ, ಇಲ್ಲವೇ ನೇರವಾಗಿ ಹಬ್ಬುತ್ತ ತಲುಪುವವು. ಪ್ರಾರಂಭದ ಸ್ಥಾನದಿಂದ ದೂರ ತಲುಪಿ ಅಲ್ಲಿಯೂ ಅದೇ ರೀತಿ ಬೆಳೆಯುವವು.

ಉದಾಹರಣೆಗೆಂದು ಸ್ತ್ರೀಯರಲ್ಲಿ ಮೊಲೆಯ ಕ್ಯಾನ್ಸರ್ ಪರಿಶೀಲಿಸೋಣ. ಮೊಲೆಯಲ್ಲಿ ಹುಟ್ಟಿದ ಕ್ಯಾನ್ಸರ್ ಜೀವಕಣಗಳು ಮೊಲೆಯಲ್ಲಿ ಗಂಟು ಮಾಡುವವು. ಮೇಲಿನ ತ್ವಚೆಯನ್ನು, ಅಂಗಾಂಶವನ್ನು ನಾಶಪಡಿಸಿ ಹುಣ್ಣು ಹುಟ್ಟಿಸುವುವು. ರಕ್ತವಾಹಿನಿಗಳ ಮಾರ್ಗವಾಗಿ ಮಿದುಳನ್ನು, ಬೇರೆ ಬೇರೆ ಎಲುಬುಗಳನ್ನು, ಯಕೃತ,

ಪುಪ್ಪುಸ, ಮೂತ್ರಪಿಂಡ ಮುಂತಾದ ಸ್ಥಳಗಳಿಗೆ ಪ್ರಯಾಣಿಸುವುವು. ಅಲ್ಲಿಯೂ ಗಂಟುಗಳಾಗಿ ಬೆಳೆಯುವುವು. ಆಯಾ ಅಂಗಾಂಶಗಳನ್ನು ನಾಶಪಡಿಸುವುವು. ವ್ಯಕ್ತಿ ಮರಣ ಹೊಂದುವವರೆಗೆ ಈ ಕಾರ್ಯ ನಡೆಯುತ್ತದೆ. ವ್ಯಕ್ತಿಯ ದೇಹದ ಎಲ್ಲ ಪೋಷಕಾಂಶಗಳನ್ನು ತಾನೇ ಕಸಿದುಕೊಂಡು ಬೆಳೆಯುತ್ತದೆ. ಉಳಿದ ದೇಹವು ಸೊರಗಿ, ಕ್ಷೀಣಗೊಂಡು ಸಾಯುವಂತೆ ಮಾಡುತ್ತದೆ. ಕ್ಯಾನ್ಸರ್ ದೇಹದಲ್ಲಿ ಕಂಡರೆ ಅದರ ಬೆಳವಣಿಗೆ ನಿಲ್ಲುವುದು ವ್ಯಕ್ತಿ ಮರಣಿಸಿದ ಮೇಲೆಯೇ.

ಕ್ಯಾನ್ಸರ್ ರೋಗ ಮಾನವರಿಂದ ಮಾನವರಿಗೆ ಹಬ್ಬುವುದೇ?



ಕ್ಯಾನ್ಸರ್ ಅಂಟು ಜಾಡ್ಯವಲ್ಲ

ಇಲ್ಲ. ನಾವು ಕ್ಯಾನ್ಸರ್ ಆದವರೊಡನೆ ಮಾತನಾಡಿದರೆ, ಅವರನ್ನು ಮುಟ್ಟಿದರೆ, ಅವರ ಬಟ್ಟೆಬರೆ ಹಿಡಿದರೆ, ಕ್ಯಾನ್ಸರ್ ಗಂಟನ್ನೋ, ಹುಣ್ಣನ್ನೋ ಸ್ಪರ್ಶಿಸಿದರೆ,

ಅವರು ಮಲಗಿದ ಹಾಸಿಗೆಯಲ್ಲಿ ಮಲಗಿದರೆ, ಅವರೊಡನೆ ಜೀವಿಸಿದರೆ, ಅವರೊಡನೆ ಊಟಮಾಡಿದರೆ ನಮಗೆ ಆ ರೋಗ ಬರುವುದಿಲ್ಲ. ಗುಂಗಾಡು ಕ್ಯಾನ್ಸರ್ ರೋಗ ಪ್ರಸಾರ ಮಾಡುವುದಿಲ್ಲ. ಕ್ಯಾನ್ಸರ್ ಆದ ತಾಯಿಯ ಎದೆಹಾಲು ಕ್ಯಾನ್ಸರ್ ಪ್ರಸಾರ ಮಾಡುವುದಿಲ್ಲ. ಮಲಮೂತ್ರ, ಉಗುಳುಗಳ ಕಶ್ಮಲತೆಯಿಂದಲೂ ಕ್ಯಾನ್ಸರ್ ಹುಟ್ಟುವುದಿಲ್ಲ. ಏಕೆಂದರೆ, ಮೇಲೆ ಹೇಳಿದಂತೆ ಕ್ಯಾನ್ಸರ್ ಆಗುವುದು ಜೀವಕಣಗಳ ಅಸ್ತವ್ಯಸ್ತ ಬೆಳವಣಿಗೆಯಿಂದಲೇ ಹೊರತು ಹೊರಗಿನ ರೋಗಾಣುಗಳಿಂದ ಅಲ್ಲ.

ಕ್ಯಾನ್ಸರ್ ದೇಹದ ಯಾವ ಭಾಗದಲ್ಲಿ ಕಾಣುವುದು?

ಕ್ಯಾನ್ಸರ್ ರೋಗ ದೇಹದ ಯಾವುದೇ ಭಾಗದಲ್ಲಿ ಕಾಣಬಹುದು. ಅದು ಚರ್ಮದಲ್ಲಿ, ಮೆದುಳಿನಲ್ಲಿ, ಸ್ನಾಯುಗಳಲ್ಲಿ, ಅನ್ನಮಾರ್ಗದಲ್ಲಿ, ಮೂತ್ರಮಾರ್ಗದಲ್ಲಿ, ಶ್ವಾಸಮಾರ್ಗದಲ್ಲಿ, ಎಲುಬಿನಲ್ಲಿ, ಕಣ್ಣಿನಲ್ಲಿ, ಕಿವಿಯಲ್ಲಿ, ಮೂಗಿನಲ್ಲಿ, ಜನನೇಂದ್ರಿಯಗಳಲ್ಲಿ, ಭ್ರೂಣವನ್ನು ಪೋಷಿಸುವ ಮಾಸ(ಪ್ಲಾಸೆಂಟಾ)ದಲ್ಲಿ ಹುಟ್ಟಬಹುದು. ಅಲ್ಲಿಂದ ದೇಹದ ಯಾವುದೇ ಭಾಗಕ್ಕೂ ತಲುಪಿ ಬೆಳೆಯಬಹುದು. ದೇಹದ ಇಂಥ ಭಾಗ ಕ್ಯಾನ್ಸರಿನಿಂದ ಮುಕ್ತವಾಗಿದೆ ಎಂದು ಹೇಳಲು ಸಾಧ್ಯವಿಲ್ಲ.

ಎಲ್ಲ ಕ್ಯಾನ್ಸರ್ ಗಂಟುಗಳೂ ಒಂದೇ ಪ್ರಕಾರವೇ?

ಇಲ್ಲ. ಅವು ಬೇರೆ ಬೇರೆ ಆಗಿರುತ್ತವೆ. ಚರ್ಮದ ಕ್ಯಾನ್ಸರ್ ಬೇರೆ, ಯಕೃತ್ತಿನ ಕ್ಯಾನ್ಸರ್ ಬೇರೆ, ಮೂತ್ರಪಿಂಡದ ಕ್ಯಾನ್ಸರ್, ಮೂತ್ರಕೋಶದ ಕ್ಯಾನ್ಸರ್ ಬೇರೆ ಬೇರೆ. ಕ್ಯಾನ್ಸರ್ ಸ್ವಲ್ಪ ಪ್ರಮಾಣದಲ್ಲಿ ಅದು ಆರಂಭಗೊಂಡ ಜೀವಕಣಗಳನ್ನು ಹೋಲಬಹುದು. ಆದರೆ ಎಲ್ಲ ಕ್ಯಾನ್ಸರ್‌ಗಳು ಒಂದೇ ಪ್ರಕಾರದವುಗಳಿರುವುದಿಲ್ಲ. ಆದರೆ, ಎಲ್ಲ ಪ್ರಕಾರದ ಕ್ಯಾನ್ಸರ್‌ಗಳು ವ್ಯಕ್ತಿಯನ್ನು ಸಾಯಿಸುವುದರಲ್ಲಿ ಮಾತ್ರ ಒಂದೇ ರೀತಿಯಾಗಿವೆ ಎನ್ನಬಹುದು.

ಕ್ಯಾನ್ಸರ್ ರೋಗ ಆನುವಂಶಿಕವೇ?

ಈ ಸಂಗತಿ ಸ್ವಲ್ಪ ಮಟ್ಟಿಗೆ ನಿಜ. ಕೆಲವೊಂದು ಪ್ರಕಾರದ ಕ್ಯಾನ್ಸರ್ ರೋಗಗಳು ಒಂದು ವಂಶದಲ್ಲಿ ಕಾಣುತ್ತವೆ. ಇದಕ್ಕೆ ದೋಷಪೂರ್ಣ ವಂಶವಾಹಿಗಳೇ ಕಾರಣ ಎಂದು ತಿಳಿದಿದೆ. ಕೇವಲ ವಂಶವಾಹಿ ಮಾತ್ರ ಕುಂದು ಪಡೆದಿದ್ದರೆ ಕ್ಯಾನ್ಸರ್ ಬರುವುದಿಲ್ಲ. ಅದರೊಡನೆ ಬೇರೆ ಕೆಲವು ಸಂಗತಿಗಳು ಕೈಗೂಡಿಸಬೇಕಾಗುವುದು.

ಕ್ಯಾನ್ಸರ್ ರೋಗವು ಜಗತ್ತಿನಲ್ಲಿ ಎಲ್ಲ ಕಡೆಗೂ ಇರುವುದೋ ಅಥವಾ ಕೆಲವೆಡೆ ಮಾತ್ರವೋ?

ಕ್ಯಾನ್ಸರ್ ರೋಗವು ಜಗತ್ತಿನಲ್ಲೆಲ್ಲಾ ಇದೆ. ಈ ದೇಶ, ಈ ಜನಾಂಗ ಕ್ಯಾನ್ಸರಿನಿಂದ ಮುಕ್ತ ಎನ್ನಲಾಗದು. ಒಂದು ಪ್ರಕಾರದ ಕ್ಯಾನ್ಸರ್ ಕಡಿಮೆ ಇದೆ ಅನ್ನುವುದರೊಳಗಾಗಿ ಆ ದೇಶದಲ್ಲಿ ಅಥವಾ ಜನಾಂಗದಲ್ಲಿ ಬೇರೊಂದು ಪ್ರಕಾರದ ಕ್ಯಾನ್ಸರ್ ಇರುವುದು ಗೋಚರಿಸುತ್ತದೆ. ಯಾವ ಜನಾಂಗವಾಗಲೀ ಅಥವಾ ದೇಶವಾಗಲೀ ಈ ಬೇನೆಯಿಂದ ಮುಕ್ತವಿಲ್ಲ.

ಕ್ಯಾನ್ಸರ್ ತರುವ ಸಂಗತಿಗಳು


ಇಂದಿನವರೆಗೆ ಮಾಡಿದ ಸಂಶೋಧನೆಗಳ ಆಧಾರದ ಮೇಲೆ ಹೇಳುವುದೆಂದರೆ ಯಾವುದೇ ಒಂದು ನಿಶ್ಚಿತ ಕಾರಣ ಮಾನವರಲ್ಲಿ ಕ್ಯಾನ್ಸರ್ ತರುತ್ತದೆ ಎನ್ನಲು ಬರುವುದಿಲ್ಲ. ಆದರೆ ಕೆಲವು ಸಂಗತಿಗಳು ಕ್ಯಾನ್ಸರ್ ತರಿಸುವ ಸಾಧ್ಯತೆಗಳು ಹೆಚ್ಚು ಎಂದು ತಿಳಿದಿದೆ. ಅವುಗಳ ಬಗ್ಗೆ ಪ್ರಮುಖ ಸಂಗತಿಗಳನ್ನು ತಿಳಿಯಲು ಪ್ರಯತ್ನಿಸೋಣ.

ಅ) ಕ್ಯಾನ್ಸರ್‌ಕಾರಕ ರಾಸಾಯನಿಕಗಳು


ನಮ್ಮ ಸಂಪರ್ಕದಲ್ಲಿ ಹಲವಾರು ಕ್ಯಾನ್ಸರ್‌ಕಾರಕ ರಾಸಾಯನಿಕಗಳು ಬಂದೇ ಬರುತ್ತವೆ. ಅವುಗಳಲ್ಲಿ ಕೆಲವು ಕ್ಯಾನ್ಸರ್‌ಕಾರಕವಾಗಿವೆ. ಕೆಲವು ಉದಾಹರಣೆಗಳನ್ನು ಮಾತ್ರ ನೋಡೋಣ.

ಮೊದಲನೆಯದು ಹೊಗೆಗಿಂಡಿಗಳಲ್ಲಿ ಶೇಖರಗೊಂಡಿರುವ ಕಾಡಿಗೆ, ಇದು ಚರ್ಮದ ಸಂಪರ್ಕದಲ್ಲಿ ಸತತವಾಗಿ ಬಂದರೆ ಆ ಭಾಗದ ಚರ್ಮದಲ್ಲಿ ಕ್ಯಾನ್ಸರ್ ಹುಟ್ಟುವುದು. ಇದು ಹೊಗೆಗಿಂಡಿ ಸ್ವಚ್ಛಗೊಳಿಸುವ ಕೆಲಸಗಾರರಲ್ಲಿ ತರಡು ಹಾಗು ತೊಡೆಯ ಚರ್ಮದ ಕ್ಯಾನ್ಸರ್ ತರುತ್ತಿತ್ತು. ಈ ಕಾಡಿಗೆಯನ್ನು ನಾವು 'ಇಲ್ಲಣ' ಎಂದು ಕರೆಯುತ್ತೇವೆ. ಇಲ್ಲಣವು ಜೋಳದ ರೊಟ್ಟಿಗಳ ಮೇಲೆ ಬೀಳುತ್ತದೆ. ಇದು ಅನ್ನನಾಳದ ಕ್ಯಾನ್ಸರ್ ತರಬಹುದೆಂದು ಕೆಲವರ ಅಭಿಮತ. ರೊಟ್ಟಿ ಕ್ಯಾನ್ಸರ್ ಕಾರಕವಲ್ಲ. ಆದರೆ ರೊಟ್ಟಿಯ ಮೇಲೆ ಬೀಳುವ ಇಲ್ಲಣ ಕ್ಯಾನ್ಸರ್‌ಕಾರಕ.

ಇಲ್ಲಣದಂತೆ ಡಾಂಬರ ಸಹ ಕ್ಯಾನ್ಸರ್‌ಕಾರಕ. ಡಾಂಬರ ಕೆಲಸಗಾರರಲ್ಲಿ ಚರ್ಮದ ಕ್ಯಾನ್ಸರ್ ಕಾಣುತ್ತದೆ. 'ಡಾಂಬರ' ಪದಾರ್ಥವನ್ನು ವಿಶ್ಲೇಷಿಸಿ ನೋಡಿದಾಗ ಅದರಲ್ಲಿ ಬಹಳ ಉಗ್ರವಾದ ರಾಸಾಯನಿಕಗಳಿವೆ ಎಂಬುದು ಬೆಳಕಿಗೆ ಬಂದಿದೆ. ಅವುಗಳು



ಡಾಂಬರ್ ಕೆಲಸ - ಕ್ಯಾನ್ಸರ್‌ಗೆ ಆಮಂತ್ರಣ



ಕ್ಷ-ಕಿರಣಗಳು ಕ್ಯಾನ್ಸರ್ ತರಬಲ್ಲವು

ಬಹುಬೇಗನೇ ಕ್ಯಾನ್ಸರ್ ತರಬಲ್ಲವು. ಹಲವಾರು ಪ್ರಯೋಗಗಳು ಪ್ರಾಣಿಗಳ ಮೇಲೆ ನಡೆಸಿದ ಅಧ್ಯಯನಗಳು ಇದನ್ನು ಖಚಿತ ಪಡಿಸಿವೆ. 'ಮೆಟಾನಿಲ್ ಯೆಲ್ಲೋ' ಎಂಬ ಹಳದಿ ಬಣ್ಣವನ್ನು ಮಿಠಾಯಿಗಾರರು ಜಿಲೇಬಿ, ಬೂಂದಿಲಾಡು ಹಾಗೂ ಹಲ್ವಾ ತಯಾರಿಸುವಲ್ಲಿ ಉಪಯೋಗಿಸುವರು. ಈ ಬಣ್ಣವನ್ನು ಉಪಯೋಗಿಸಬಾರದೆಂದು ಕಾಯ್ದೆ ಇದ್ದರೂ ಜನರನ್ನು ಆಕರ್ಷಿಸಲು ಬಳಸುತ್ತಾರೆ. ಆದರೆ ಈ ರಾಸಾಯನಿಕವು ಕ್ಯಾನ್ಸರ್ ಕಾರಕವಾಗಿದೆ.


ಉಪ್ಪಿನಕಾಯಿ, ಉಪ್ಪು ಹಚ್ಚಿ ಒಣಗಿಸಿದ ಮೀನುಗಳಲ್ಲಿ ಉಪ್ಪಿನೊಡನೆ ನೈಟ್ರೇಟ್ ಲವಣವೂ ಇರಬಹುದು. ಇದು ನೈಟ್ರೈಟ್ ಆಗಿ ಕ್ಯಾನ್ಸರ್ ಹುಟ್ಟಿಸಬಲ್ಲದು. ಹೀಗೆ ಹಲವಾರು ರಾಸಾಯನಿಕಗಳು ನಮ್ಮ ಸಂಪರ್ಕದಲ್ಲಿ ಬಂದು ಕ್ಯಾನ್ಸರ್ ತರಿಸುತ್ತವೆ.

ಆ) ಕ್ಯಾನ್ಸರ್ ಕಾರಕ ಪದಾರ್ಥ ವಿಜ್ಞಾನದ ಘಟಕಗಳು

ಹಲವಾರು ಸಂಗತಿಗಳು ಕ್ಯಾನ್ಸರ್ ಹುಟ್ಟಿಸಬಲ್ಲವು. ಅವುಗಳಲ್ಲಿ ಮೊದಲು ಸೂರ್ಯನ ಬಿಸಿಲನ್ನೇ ನೋಡಬಹುದು. ಸೂರ್ಯನ ಕಿರಣಗಳು ಚರ್ಮದ ಮೇಲೆ ತಮ್ಮ ಕ್ರಿಯೆ ನಡೆಸಿ ಅಲ್ಲಿ ಕ್ಯಾನ್ಸರ್ ತರಬಹುದು. ಒಂದು ವೇಳೆ ವ್ಯಕ್ತಿಯ ಚರ್ಮ ಕಪ್ಪಾಗಿದ್ದರೆ ಸೂರ್ಯ ಕಿರಣಗಳು ಚರ್ಮದ ತಳವನ್ನು ಮುಟ್ಟಲಾರವು. ಯಾಕೆಂದರೆ ಕಪ್ಪಗಿರುವವರ ಚರ್ಮದಲ್ಲಿ 'ಮೆಲಾನಿನ್' ಎಂಬ ಬಣ್ಣದ ಕಣಗಳು ಹೆಚ್ಚಿಗಿದ್ದು ಅವು ಚರ್ಮವನ್ನು ರಕ್ಷಿಸುತ್ತವೆ. ಬಿಳಿಬಣ್ಣದವರಲ್ಲಿ 'ಮೆಲಾನಿನ್' ಬಣ್ಣ ಇರುವುದಿಲ್ಲ. ಆಗ ಸಂರಕ್ಷಣೆ ಸಿಗದೇ ಹೋಗಿ ಕ್ಯಾನ್ಸರ್ ಬರುವುದು.

ಸೂರ್ಯಕಿರಣಗಳಂತೆ ವೈದ್ಯಕೀಯ ಪರೀಕ್ಷೆಗಳಲ್ಲಿ ಬಳಸುವ 'ಎಕ್ಸರೇ' ಅಥವಾ 'ಕ್ಷ' ಕಿರಣಗಳು ಕ್ಯಾನ್ಸರ್ ಕಾರಕವಾಗಿವೆ. ಪದೇ ಪದೇ ಈ ಕಿರಣಗಳ ಕ್ರಿಯೆಗೆ ಮೈ ಒಡ್ಡಿದವರು ಬೇಗನೇ ಕ್ಯಾನ್ಸರಿಗೆ ಬಲಿಯಾಗುವರು. ಎಕ್ಸ್‌ರೇ ವಿಭಾಗದಲ್ಲಿ ಕಾರ್ಯಮಾಡುವ ವೈದ್ಯರಲ್ಲಿ ಹಾಗು ಕೆಲಸಗಾರರಲ್ಲಿ ಕ್ಯಾನ್ಸರ್ ಪ್ರಮಾಣ ಬಹಳ ಹೆಚ್ಚಿಗಿರುವುದು ಬೆಳಕಿಗೆ ಬಂದಿದೆ.

ರೇಡಿಯಮ್‌ದಂತೆ ಇತರ ವಿಕಿರಣ ವಸ್ತುಗಳೂ ಸಹ ಕ್ಯಾನ್ಸರ್ ಕಾರಕವಾಗಿವೆ.



ಆಹಾ ಚುಟ್ಟಾ ..... ತರುವುದು ಚಟ್ಟ

೩) ಕ್ಯಾನ್ಸರ್ ಕಾರಕ ಸೂಕ್ಷ್ಮಜೀವಿಗಳು

ಕ್ಯಾನ್ಸರ್ ರೋಗವು ಸೂಕ್ಷ್ಮಜೀವಿಗಳಿಂದ ಬರುವುದೆಂದು ಅನೇಕರ ವಾದವಿದೆ. ಸೂಕ್ಷ್ಮಜೀವಿಗಳಲ್ಲಿ ವೈರಸ್ ಜೀವಿಗಳು ಈ ಪಾತ್ರ ವಹಿಸುವವೆಂದು ಸಂಶಯ.


ಪೋಲಿಯೋಮಾ ಎಂಬ ಹೆಸರಿನ ವೈರಸ್ ಇದೆ. ಈ ಸೂಕ್ಷ್ಮ ಜೀವಿಗಳನ್ನು ಪ್ರಯೋಗ ಪ್ರಾಣಿಗಳಲ್ಲಿ ಚುಚ್ಚಿದರೆ ಆ ಪ್ರಾಣಿ ಹಲವಾರು ಪ್ರಕಾರದ ಕ್ಯಾನ್ಸರ್‌ಗಳನ್ನು ಪಡೆಯುವುದು. ಇದೊಂದೇ ಸೂಕ್ಷ್ಮಜೀವಿಯಿಂದ ಚರ್ಮದ ಕ್ಯಾನ್ಸರ್, ರಕ್ತದ ಕ್ಯಾನ್ಸರ್, ಎಲುಬಿನ ಕ್ಯಾನ್ಸರ್ ಮುಂತಾದವನ್ನು ಹುಟ್ಟಿಸಲು ಸಾಧ್ಯ. ಇದೇ ಪ್ರಕಾರ ಕೆಲವು ಪಕ್ಷಿಗಳಲ್ಲೂ ಸಹ ಕೆಲವೊಂದು ವೈರಸ್ ಸೂಕ್ಷ್ಮ ಜೀವಿಗಳಿಂದ ಕ್ಯಾನ್ಸರ್ ತರಿಸಬಹುದು.

ಆದರೆ ಮಾನವರಲ್ಲಿ ಇದೇ ಸಂಗತಿಯನ್ನು ಖಚಿತವಾಗಿ ಹೇಳಲುಬಾರದು. ಕೆಲವೊಂದು ಕ್ಯಾನ್ಸರ್‌ಗಳಲ್ಲಿ ವೈರಸ್ ಸೂಕ್ಷ್ಮಜೀವಿಗಳ ಪ್ರಮುಖ ಪಾತ್ರವಿದೆ ಎಂಬುದು ಅನಿಸಿದೆ. ಉದಾಹರಣೆಗೆ ಸ್ತ್ರೀಯರ ಗರ್ಭಕೋಶ ದ್ವಾರದ ಕ್ಯಾನ್ಸರ್. ಅದೇ ರೀತಿ ಕೆಲವು ಹಾಲುರಸಗ್ರಂಥಿಗಳ ಕ್ಯಾನ್ಸರ್, ವೈರಸ್ ಜೀವಿಗಳಿಂದಲೇ ಎಂಬ ಸಂಶಯ ಬಲವಾಗಿದೆ. ಆದರೆ ಅದು ಖಚಿತಗೊಳ್ಳಲು ಹೆಚ್ಚಿನ ಪ್ರಯತ್ನಗಳು ಬೇಕು.

ಆದ್ದರಿಂದ ಕ್ಯಾನ್ಸರ್ ಬರಲು ಒಂದೇ ಕಾರಣ ಎಂದು ಹೇಳಲು ಸಾಧ್ಯವಿಲ್ಲ. ಹಲವಾರು ವಿಧಗಳಿಂದ ಅದು ಜನ್ಮತಾಳಬಹುದು. ಮೇಲಿನ ಸಂಗತಿಗಳಲ್ಲದೆ ಕೆಲವು ಚಟಗಳಿಂದ ಕ್ಯಾನ್ಸರ್ ಬರಬಹುದು ಎಂಬ ಅರಿವು ಖಚಿತವಾಗುತ್ತಲಿದೆ. ಅಂಥ ಚಟಗಳನ್ನು ಪರಿಶೀಲಿಸೋಣ.

ತಿರುವು ಮುರುವು ಚುಟ್ಟಾ ಸೇದುವುದು ಹಾಗೂ ಅಂಗಳ ಕ್ಯಾನ್ಸರ್

ಆಂಧ್ರ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಸ್ತ್ರೀಯರು ಚುಟ್ಟಾ ಸೇದುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ. ಅವರು ಸುಮಾರು ಹದಿವಯಸ್ಸಿನಲ್ಲಿ ಈ ಚಟ ಬೆಳೆಸಿಕೊಳ್ಳುವರು. ಮನೆಯಲ್ಲಿ ಎಲ್ಲ ಸ್ತ್ರೀಯರೂ ಈ ಪದ್ಧತಿಗೆ ಒಳಪಟ್ಟಿರಬಹುದು. ಮನೆಯಲ್ಲಿರುವ ಹಿರಿಯ ಹೆಣ್ಣು ಮಗಳೇ ಇದನ್ನು ಪ್ರೋತ್ಸಾಹಿಸುವಳು. ಈ ಸ್ತ್ರೀಯರು ಚುಟ್ಟಾ ಸೇದುವ



ಕೈನಿ ತಿನ್ನುವುದರಿಂದ ಒಳತುಟಿ ಮತ್ತು ಗಲ್ಲಗಳ ಕ್ಯಾನ್ಸರ್

ಪದ್ಧತಿ ಭಿನ್ನವಾಗಿದೆ. ಉಳಿದವರು ಚುಟ್ಟಾ ಸೇದುವಾಗ ಉರಿಯುವ ತುದಿಯನ್ನು ಹೊರಗೆ ಇಟ್ಟು ಸೇದುವರು. ಆದರೆ ಈ ಸ್ತ್ರೀಯರು ಉರಿಯುವ ತುದಿಯನ್ನು ಬಾಯೊಳಗೆ ಇಟ್ಟುಕೊಂಡು ಸೇದುವರು. ಸೇದುವಾಗ ಚುಟ್ಟಾದ ತುದಿಯಿಂದ ಏಳುವ ಕಿಡಿಗಳು ಹಾಗು ಬಿಸಿ ಸೇದುವವರ ಅಂಗಳವನ್ನು ಹಾಗು ನಾಲಿಗೆಯ ಹಿಂಭಾಗವನ್ನು ಸುಡುತ್ತವೆ. ಸುಟ್ಟ ಗಾಯಗಳು ಪದೇ ಪದೇ ಸಿಡಿಯುವ ಕಿಡಿಗಳಿಂದ ದೀರ್ಘ ಅವಧಿಯವರೆಗೆ ಮಾಯುವದಿಲ್ಲ. ಇಂಥ ಸುಟ್ಟ ಗಾಯಗಳ ಮೇಲೆ ತಂಬಾಕಿನ ಹೊಗೆಯು ನಿತ್ಯವೂ ಲೇಪನ ಕೊಡುವುದು. ಹೀಗೆ ದೀರ್ಘಕಾಲದ ಗಾಯ ಹಾಗೂ ತಂಬಾಕಿನ ಹೊಗೆಗಳು ಜೋಡಿಯಾಗಿ ಅಂಗಳದಲ್ಲಿ ಬಹು ಬೇಗನೇ ಕ್ಯಾನ್ಸರ್ ಹುಟ್ಟಿಸುವುವು. ಆಂಧ್ರ ಪ್ರದೇಶದ ಈ ಜಿಲ್ಲೆಗಳಲ್ಲಿ ಸಾವಿರಾರು ಸ್ತ್ರೀಯರು ಅಂಗಳ ಕ್ಯಾನ್ಸರಿನಿಂದ ಸಾಯುತ್ತಾರೆ.

ತಿರುವು ಮುರುವು ಚುಟ್ಟಾ ಸೇದದ ಸ್ತ್ರೀಯರಲ್ಲಿ ಇಂಥ ಕ್ಯಾನ್ಸರ್ ಕಾಣುವುದೇ ಇಲ್ಲವೆಂದು ಹೇಳಬೇಕು. ಈ ಚಟವನ್ನು ಬಿಟ್ಟವರಲ್ಲಿ ಅಂಗಳ ಕ್ಯಾನ್ಸರ್ ಬರುವುದಿಲ್ಲ. ಹೀಗೆ ಅಂಗಳ ಕ್ಯಾನ್ಸರ್ ತಿರುವು ಮುರುವು ಚುಟ್ಟಾ ಸೇದುವವರಲ್ಲಿ ಮಾತ್ರ ಕಂಡುಬರುತ್ತದೆ.

ತಂಬಾಕಿನಲ್ಲಿ ಕ್ಯಾನ್ಸರ್ ಹುಟ್ಟಿಸುವ ಹಲವಾರು ಘಟಕಗಳಿವೆ. ತಂಬಾಕನ್ನು ಯಾವ ರೀತಿಯಿಂದ ಉಪಯೋಗಿಸಿದರೂ ಸಾಕು ಅಲ್ಲಿ ಕ್ಯಾನ್ಸರ್ ಮೂಡುತ್ತದೆ.

016143

ಖೈನಿ ತಿನ್ನುವುದು ಮತ್ತು ಒಳ ತುಟಿಯ ಕ್ಯಾನ್ಸರ್

ಬಿಹಾರ ರಾಜ್ಯ ಹಾಗು ಉಳಿದ ಉತ್ತರ ಭಾರತದ ರಾಜ್ಯಗಳಲ್ಲಿ ಖೈನಿ ತಿನ್ನುವ ಚಟವಿದೆ. ಖೈನಿ ಅಂದರೆ ಸುಣ್ಣ ಮತ್ತು ತಂಬಾಕುಗಳನ್ನು ನಾದಿ ಮಾಡಿದ ಉಂಡೆ ಎನ್ನಬಹುದು. ಅಂಗೈಯಲ್ಲಿ ಸೇಂಗಾ ಕಾಳಿನಷ್ಟು ಸುಣ್ಣವನ್ನು ತೆಗೆದುಕೊಂಡು ಅದರಲ್ಲಿ ತಂಬಾಕಿನ ಪುಡಿಯನ್ನು ಸೇರಿಸಿ ಹೆಬ್ಬೆಟ್ಟಿನಿಂದ ನಾದುತ್ತಾರೆ. ನಾದುವುದರಿಂದ ಸುಣ್ಣ ಹಾಗು ತಂಬಾಕು ಹದವಾಗಿ ಬೆರೆಯುತ್ತವೆ. ಉಳಿದ ಪುಡಿಯನ್ನು ಊದಿ ಚೆಲ್ಲುವರು. ಕೊನೆಗೆ ನಾದಿದ ಉಂಡೆಯನ್ನು ತೆಗೆದುಕೊಂಡು ತುಟಿ ಹಾಗು ವಸಡುಗಳ ಮಧ್ಯದಲ್ಲಿ, ಇಲ್ಲವೆ ಒಳಗಲ್ಲ ಹಾಗು ವಸಡುಗಳ ನಡುವೆ ಇಟ್ಟುಕೊಳ್ಳುವರು.

ಉಂಡೆಯಲ್ಲಿಯ ಸುಣ್ಣವು ಒಳತುಟಿಯ ಅಥವಾ ಒಳಗಲ್ಲದ ಮೆತ್ತನೆಯ ಲೋಳ್ಪರೆಯನ್ನು ಸುಡುತ್ತದೆ. ಆಗ ಅಲ್ಲಿ ತಂಬಾಕು ತನ್ನ ಪ್ರಭಾವ ಬೀರತೊಡಗುವುದು. ಈ ಕ್ರಿಯೆಯು ಹಲವಾರು ವರ್ಷಗಳವರೆಗೆ ಸತತವಾಗಿ ನಡೆದು ಆ ಭಾಗದಲ್ಲಿ ದೀರ್ಘಕಾಲದ ಹುಣ್ಣು ಉಳಿಯುತ್ತದೆ. ಬರಬರುತ್ತ ಹುಣ್ಣಿನಲ್ಲಿ ಕ್ಯಾನ್ಸರ್ ಕಣಗಳು ಜನ್ಮ ತಾಳುತ್ತವೆ. ಈ ಕ್ಯಾನ್ಸರ್ ಹುಣ್ಣಿಗೆ ಖೈನಿ ಕ್ಯಾನ್ಸರ್ ಎಂದು ಹೇಳುವರು. ಖೈನಿ ಕ್ಯಾನ್ಸರ್ ಆದ ವ್ಯಕ್ತಿಯ ತುಟಿ, ಗಲ್ಲಗಳು ನಾಶವಾಗಿ ಮುಖವು ವಿಕಾರವಾಗುತ್ತದೆ. ಅಲ್ಲದೆ ವ್ಯಕ್ತಿ ಬೇಗನೆ ಮರಣ ಹೊಂದುತ್ತಾನೆ.

ಖೈನಿ ಚಟವು ಹದಿವಯಸ್ಸಿನಲ್ಲಿ ಕಾಲಿಡುತ್ತದೆ. ಮೊದಮೊದಲು ಎಂದಾದರೊಂದು ದಿನ ರುಚಿ ನೋಡಲು ಪ್ರಾರಂಭವಾಗುವುದು. ನಂತರ ದಿನಕ್ಕೊಮ್ಮೆ, ಆಮೇಲೆ ಹಲವಾರು ಬಾರಿ, ಕೊನೆಗೆ ಈ ಚಟವು ಮಲಗಿದ್ದಾಗಲೂ ಖೈನಿ ಬಾಯಿಯಲ್ಲಿ ಇರುವಂತೆ ಬೆಳೆಯುತ್ತದೆ. ಖೈನಿ ಚಟವು ಪ್ರಾರಂಭವಾದುದು ಬಿಹಾರದಲ್ಲಿ ಇರಬಹುದು. ಆದರೆ ಇಂದು ಅದು ಎಲ್ಲ ರಾಜ್ಯಗಳಿಗೂ ಹಬ್ಬಿದೆ. ಅದರಲ್ಲೂ ವಿದ್ಯಾರ್ಥಿ ಸಮುದಾಯಗಳಲ್ಲಿ ಬೇರು ಬಿಡಹತ್ತಿದೆ. ಹಲವಾರು ಕಂಪನಿಗಳು ಈ ಖೈನಿಯನ್ನು ತಯಾರಿಸಿ ಸುಂದರ ಪ್ಯಾಕೆಟ್ಟುಗಳಲ್ಲಿ ಮಾರುತ್ತಿರುವರು. ಕಂಪನಿಗೆ ಇದು ಲಾಭವಾಗಬಹುದು. ಆದರೆ ಯುವಕರಿಗೆ ಹಾನಿ, ದೇಶಕ್ಕೆ ಕೆಟ್ಟ ಪಿಡುಗು.

ಬೀಡಿ ಸೇದುವದು ಮತ್ತು ಕ್ಯಾನ್ಸರ್

ಬೀಡಿ ಎಂದರೆ ಏನು ಎಂದು ಹೇಳುವ ಅವಶ್ಯಕತೆಯೇ ಇಲ್ಲ. ಪ್ರತಿಯೊಂದು ಊರಲ್ಲಿ, ಪ್ರತಿಯೊಂದು ಓಣಿಯಲ್ಲಿ, ಗಲ್ಲಿಯಲ್ಲಿ ಬೀಡಿ ತುಂಡುಗಳು ಕಣ್ಣಿಗೆ ಬೀಳುತ್ತವೆ. ಅಂತಿಂಥ ಸ್ಥಳಗಳಲ್ಲಿ ಅಲ್ಲ ದೇವರ ಗುಡಿ, ಮಸೀದಿ, ಚರ್ಚುಗಳ ಹಾಗು ಶಾಲೆಯ ಆವರಣದಲ್ಲೂ ಅವು ಕಾಣುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಅವು ಸರ್ವವ್ಯಾಪಿ. ಅಷ್ಟೊಂದು ಅದ್ಭುತವಾಗಿ ಬೀಡಿ ತಯಾರಿಕೆ, ಮಾರಾಟ, ನಮ್ಮ ದೇಶದಲ್ಲಿ ಬೆಳೆದು ಬಿಟ್ಟಿದೆ. ಇದರ ಬೆಳವಣಿಗೆಗೆ ಸರ್ಕಾರಗಳು, ಬ್ಯಾಂಕುಗಳು ಸಾಲ ಕೊಡುತ್ತವೆ. ಸಹಾಯ ಮಾಡುತ್ತವೆ. ಜನರಿಗೆ ಹೊಟ್ಟೆ ತುಂಬಿಕೊಳ್ಳುವ ಉದ್ಯೋಗವೆಂದು ಅನೇಕ ಮುಖಂಡರು ಭಾಷಣ ಮಾಡುತ್ತಾರೆ.

ಬೀಡಿಯ ತಯಾರಿಕೆಯ ಕಡೆಗೆ ಒಂದು ಮಿನಿಟು ನೋಡೋಣ. ಇದರ ಆಕಾರ ವಿಶಿಷ್ಟವಾಗಿದೆ. ಕಾಡಿನ ಎಲೆಯಲ್ಲಿ ಸ್ವಲ್ಪ ತಂಬಾಕನ್ನು ಹಾಕಿ ಸುರುಳಿ ಸುತ್ತುವರು. ಸುರುಳಿ ಮಾಡುವಾಗ ಒಂದು ತುದಿ ಮೊಂಡಾಗಿ ಹರವಾಗಿರುತ್ತದೆ, ಇನ್ನೊಂದು ತುದಿಯು ಚಪ್ಪಟೆಯಾಗಿ ಚೂಪಾಗಿರುತ್ತದೆ. ಮೊಂಡ ತುದಿಗೆ ಬೆಂಕಿ ತಗುಲಿಸಿ ಬೀಡಿ ಸುಡಲು ಪ್ರಾರಂಭಿಸುತ್ತಾರೆ. ಚಪ್ಪಟೆಯಾದ ತುದಿಯಿಂದ ಹೊಗೆ ಎಳೆಯುತ್ತಾರೆ, ಚಪ್ಪಟೆಯಾದ ತುದಿಯಿಂದ ಹೊರಬರುವ ಹೊಗೆಯು ಕಾರಂಜಿಯಂತೆ, ಜೀಕಳಿಯಂತೆ ಚಿಮ್ಮಿ ಬರುತ್ತದೆ. ಇದು ಬಿಸಿಯಾಗಿರುತ್ತದೆ. ಅದರಲ್ಲಿ ತಂಬಾಕಿನ ಹಲವಾರು ವಿಷಕಾರಿ ಮತ್ತು ಕ್ಯಾನ್ಸರ್‌ಕಾರಕ ಘಟಕಗಳು ಇರುತ್ತವೆ.

ಬೀಡಿ ಸೇದುವ ವ್ಯಕ್ತಿ ಚಪ್ಪಟೆಯಾದ ತುದಿಯನ್ನು ಬಾಯಿಯಲ್ಲಿ ಹಿಡಿದು ಜೋರಿನಿಂದ ಎಳೆದರೆ ಹೊಗೆಯು ಜೀಕಳಿಯಂತೆ ಚಿಮ್ಮಿ ನಾಲಿಗೆಯ ಹಿಂಭಾಗಕ್ಕೆ ಇಲ್ಲವೆ ಯಾವುದೇ ಒಂದು ಕಡೆಯ ಗಂಟಲಿಗೆ ಅಪ್ಪಳಿಸುತ್ತದೆ, ಹೀಗೆ ಅಪ್ಪಳಿಸುವ ಹೊಗೆಯು ತನ್ನಲ್ಲಿಯ ಕ್ಯಾನ್ಸರ್ ಘಟಕಗಳನ್ನು ಲೋಳ್ಪರೆಯ ಮೇಲೆ ಬಿಡುವುದು. ಈ ಕ್ಯಾನ್ಸರ್-ಕಾರಕ ವಸ್ತುಗಳಿಂದ ಅಲ್ಲಿ ಕ್ಯಾನ್ಸರ್ ಹುಟ್ಟುವುದು. ಬೀಡಿ ಸೇದುವ ಪ್ರದೇಶಗಳಲ್ಲಿ ನಾಲಿಗೆಯ ಹಿಂಭಾಗದ ಕ್ಯಾನ್ಸರ್ ಗಂಟಲ ಕ್ಯಾನ್ಸರ್ ಅತಿ ಹೆಚ್ಚು. ಬೀಡಿ ಸೇದದೇ ಇರುವ ರಾಜ್ಯಗಳಲ್ಲಿ ಇಂಥ ಕ್ಯಾನ್ಸರ್ ನೋಡಲು ಸಹ ಸಿಗುವುದಿಲ್ಲ. ಉದಾಹರಣೆಗೆ ಪಂಜಾಬದಲ್ಲಿ ಅಥವಾ ಸಿಖ್ ಜನರಲ್ಲಿ ಈ ಕ್ಯಾನ್ಸರ ವಿರಳ. ಆದ್ದರಿಂದ ಗಂಟಲಲ್ಲಿ ತೋರುವ ಕ್ಯಾನ್ಸರ್‌ಗಳಿಗೆ ಬೀಡಿ ಕ್ಯಾನ್ಸರ್ ಎಂದೇ ಕರೆಯುತ್ತಾರೆ.

ಎಲೆ-ಅಡಿಕೆ-ಹೊಗೆಸೊಪ್ಪು ಮತ್ತು ಕ್ಯಾನ್ಸರ್

ಇನ್ನೊಂದು ದೊಡ್ಡ ಪ್ರಮಾಣದ ಚಟವೆಂದರೆ ಎಲೆ ಅಡಿಕೆ ಹಾಗೂ ತಂಬಾಕು ಮೆಲ್ಲುವದು. ಈ ಚಟವು ಕರ್ನಾಟಕ, ಮಹಾರಾಷ್ಟ್ರ, ಕೇರಳ, ಆಂಧ್ರ, ತಮಿಳುನಾಡು, ಬಂಗಾಳಗಳಲ್ಲಿ ಜಾಸ್ತಿ, ಎಲೆ-ಅಡಿಕೆಗಳ ಜೊತೆಗೆ ಅನೇಕ ಜನರು ತಂಬಾಕನ್ನು ಸಹ ದೊಡ್ಡ ಪ್ರಮಾಣದಲ್ಲಿ ಮೆಲ್ಲುತ್ತಾರೆ. ಮೆಲ್ಲುವಾಗ ಇವೆಲ್ಲವುಗಳಿಂದಾದ ಉಂಡೆಯನ್ನು ಗಲ್ಲ ಹಾಗು ವಸಡುಗಳ ನಡುವೆ ಇಟ್ಟುಕೊಂಡು ಸ್ವಲ್ಪ ಸ್ವಲ್ಪವಾಗಿ ಜಗಿದು ಜಗಿದು ನುರಿಸುತ್ತಾರೆ.

ಉಂಡೆಯನ್ನು ಶೇಖರಿಸಿ ಇಟ್ಟುಕೊಂಡ ಸ್ಥಳವು ತಂಬಾಕಿನ ಕ್ಯಾನ್ಸರ್‌ಕಾರಕ ಘಟಕಗಳ ಪ್ರಭಾವಕ್ಕೆ ಒಳಗಾಗಿ ಮೊದಲು ಬಿಳುಪಾಗುತ್ತದೆ. ನಂತರ ಹುಣ್ಣೊಡೆಯುತ್ತದೆ. ಕೊನೆಗೆ ಈ ಹುಣ್ಣಿನಲ್ಲಿಯೇ ಕ್ಯಾನ್ಸರ್ ಜನ್ಮತಾಳುತ್ತದೆ. ಕಾರಣ, ಗಲ್ಲದ ಲೋಳ್ಪರೆ, ನಾಲಿಗೆಯ ಬದಿ, ವಸಡುಗಳು, ಅಂಗಳಗಳಲ್ಲಿ ಕಾಣುವ ಕ್ಯಾನ್ಸರ್‌ಗಳು ಎಲೆ-ಅಡಿಕೆ-ತಂಬಾಕು ಮೆಲ್ಲುವುದರಿಂದಾಗುತ್ತವೆಂದು, ಇವುಗಳಿಗೆ ಎಲೆ ಅಡಿಕೆ-ಕ್ಯಾನ್ಸರ್ ಎಂದು ಹೆಸರು. ಯಾವ ಪ್ರದೇಶದಲ್ಲಿ ಈ ಚಟವು ಹೆಚ್ಚಾಗಿದೆಯೋ ಆಯಾ ಪ್ರದೇಶದಲ್ಲಿ ಈ ಕ್ಯಾನ್ಸರ್‌ನಿಂದ ಮರಣ ಹೊಂದುವ ಜನರೂ ಹೆಚ್ಚು. ಯಾವ ಪ್ರಾಂತಗಳಲ್ಲಿ ಈ ಚಟವು ಇಲ್ಲವೋ ಆ ಪ್ರದೇಶದಲ್ಲಿ ಈ ಕ್ಯಾನ್ಸರ್ ಕಾಣುವುದು ಕಡಿಮೆ. ಕಾಶ್ಮೀರಿಗಳಲ್ಲಿ, ಪಂಜಾಬಿಗಳಲ್ಲಿ ಈ ಕ್ಯಾನ್ಸರ್ ಕಾಣದು.

ಪ್ರಾರಂಭದಲ್ಲಿ ಜನರು ಈ ಸಂಗತಿಯನ್ನು ನಂಬುತ್ತಿರಲಿಲ್ಲ. ವಿಜ್ಞಾನಿಗಳೂ ಸಹ ಒಪ್ಪುತ್ತಿರಲಿಲ್ಲ. ಕಾರಣ ಕೆಲವು ಪ್ರಯೋಗಗಳನ್ನು ನಡೆಸಬೇಕಾಯಿತು. ಈ



ವಿಪರೀತ ಎಲೆ ಅಡಿಕೆ ತಿನ್ನುವುದರಿಂದ ಕ್ಯಾನ್ಸರ್ ಬರಬಹುದು

ಪ್ರಯೋಗಗಳಲ್ಲಿ ಜನರು ತಿನ್ನುವ ಎಲೆ-ಅಡಿಕೆ, ಸುಣ್ಣ, ತಂಬಾಕು ಕುಟ್ಟಿ ಮುದ್ದೆ ಮಾಡುತ್ತಿದ್ದರು. ಈ ಮುದ್ದೆಯನ್ನು ಮಂಗಗಳ ಬಾಯಿಯಲ್ಲಿ, ಗಿನಿಹಂದಿ, ಮುಂತಾದ


ಪ್ರಯೋಗಾಲಯ ಪ್ರಾಣಿಗಳ ಗಲ್ಲದ ಚೀಲಗಳಲ್ಲಿ ಇಟ್ಟು ಪರೀಕ್ಷಿಸಿದರು. ಈ ಪ್ರಾಣಿಗಳಲ್ಲೂ ಸಹ, ಮಾನವರಲ್ಲಿ ಕಾಣುವಂಥ ಕ್ಯಾನ್ಸರ್ ಮೂಡಿಸಿದರು. ಹೀಗೆ ಈ ಚಟವು ಕ್ಯಾನ್ಸರ್ ತರಿಸುವುದೆಂದು ಖಚಿತವಾಯಿತು.

ಎಲೆ-ಅಡಿಕೆ-ತಂಬಾಕು ಹೇಗೆ ಕ್ಯಾನ್ಸರ್ ಹುಟ್ಟಿಸುತ್ತವೆ ಎಂಬುದನ್ನು ವಿವರಿಸುವುದು ಈಗ ಕಠಿಣವೆನಿಸದು. ಎಲೆಯು ತನ್ನಲ್ಲಿಯ ರಸಗಳಿಂದ ಬಾಯಿಯಲ್ಲಿಯ ಅನೇಕ ದುರ್ಗಂಧಕಾರಕ ಬ್ಯಾಕ್ಟೀರಿಯಾಗಳನ್ನು ಸಾಯಿಸುತ್ತದೆ. ಅಲ್ಲದೆ ಲೋಳ್ಪರೆಯ ಮೇಲೆ ತನ್ನ ಕಾರ್ಯ ನಡೆಸಿ ಚಿಕ್ಕ ಪುಟ್ಟ ಹುಣ್ಣುಗಳನ್ನು ಸೃಷ್ಟಿಸುತ್ತದೆ. ಈ ಹುಣ್ಣುಗಳಲ್ಲಿಯ ಜೀವಕಣಗಳ ಮೇಲೆ ತಂಬಾಕು ತನ್ನ ಪ್ರಭಾವ ಬೀರುತ್ತ ಜೀವಕಣಗಳನ್ನು ಕ್ಯಾನ್ಸರ್ ಜೀವಕಣಗಳನ್ನಾಗಿಸುತ್ತದೆ, ಆಗ ಸಾದಾ ಹುಣ್ಣು ಕ್ಯಾನ್ಸರ್ ಆಗುವುದು.

ಸಿಗರೇಟು, ಸಿಗಾರ ಸೇದುವ ಚಟ ಹಾಗು ಕ್ಯಾನ್ಸರ್

ಸಿಗರೇಟು - ಸಿಗಾರಗಳನ್ನೂ ಸಹ ಜನರು ಚೆನ್ನಾಗಿ ಬಲ್ಲರು. ಇವುಗಳ ಸುಟ್ಟ ತುಂಡುಗಳು ಎಲ್ಲಿಯಾದರೂ ದೊರೆಯುತ್ತವೆ. ಸಿಗರೇಟುಗಳ ಪ್ರಚಾರ ಯುವಕರನ್ನು ಆಕರ್ಷಿಸುವ ರೀತಿಯಲ್ಲಿ ಪರಿಪರಿಯಾಗಿ ಕಾಣಿಸಿಕೊಳ್ಳುತ್ತವೆ. ಒಂದು ಹೀರೋ ಹೊಂಡಾ, ಮಗ್ಗುಲಲ್ಲಿ ಓರ್ವಸುಂದರಿ ಹಾಗು ಕೈಯಲ್ಲಿ ಒಂದು ಸಿಗರೇಟು ಮುಂತಾಗಿ ನೋಡುವ ಯುವಕರಿಗೆ ಅವೆಲ್ಲ ಅವರ ಜೀವನದ ಗುರಿಗಳು ಎನ್ನಿಸುವ ಮಟ್ಟಿಗೆ ಆಸೆ ಮೂಡಿಸುತ್ತಿವೆ. ಇದರೊಡನೆ ಹಲವಾರು ತರದ ಪಂದ್ಯಾಟಗಳು ಸಿಗರೇಟುಗಳ ಕಂಪನಿಗಳ ಹೆಸರಿನಲ್ಲಿ ನಡೆಯುತ್ತವೆ. ಸಮಾರಂಭಗಳಲ್ಲಿ ಕೆಲವು ಸಲ ಸಿಗರೇಟುಗಳನ್ನು ಪುಕ್ಕಟೆಯಾಗಿ ಹಂಚುತ್ತಾರೆ. ಒಟ್ಟಿನಲ್ಲಿ ಯುವಕರು ಸಿಗರೇಟಿನ ಆಮಿಷಕ್ಕೆ ಬೀಳುವಂತೆ ಮಾಡುವರು.

ಸಿಗರೇಟಿನಲ್ಲಿ, ಬೀಡಿಗಿಂತ ಅಧಿಕ ತಂಬಾಕು ಇರುತ್ತದೆ. ಸಿಗರೇಟಿನ ಹೊಗೆಯು ಮೋಡಗಳಂತೆ ಹರಡುವುದು. ಬೀಡಿಯ ಹೊಗೆಯು ಬಂದಂತೆ ಈ ಹೊಗೆಯು ಜೀಕಳಿಯಂತೆ ಬರುವುದಿಲ್ಲ. ಆದರೆ ದೊಡ್ಡ ಪ್ರಮಾಣದಲ್ಲಿ ಅದು ಶ್ವಾಸಕೋಶಗಳನ್ನು ಸೇರುವುದು. ಶ್ವಾಸನಾಳಗಳ ಮೇಲೆ ತನ್ನ ಪ್ರಭಾವ ಬೀರುವುದು. ಈ ಕ್ರಿಯೆಯು ಅನೇಕ



ಸಹಜ ಶ್ವಾಸಕೋಶದ ಕೋಶಗಳು

ಕ್ಯಾನ್ಸರ್ ಪೀಡಿತ ಶ್ವಾಸಕೋಶದ ಕೋಶಗಳು

ಸಿಗರೇಟು ಸೇವನೆ ಶ್ವಾಸಕೋಶ ಕ್ಯಾನ್ಸರ್ ಉಂಟುಮಾಡಬಲ್ಲದು

ವರ್ಷಗಳವರೆಗೆ ನಡೆದರೆ ಶ್ವಾಸನಾಳಗಳು ತಮ್ಮ ಲೋಳ್ಪೊರೆಯಲ್ಲಿ ಬದಲಾವಣೆ ತೋರುತ್ತ ಕೊನೆಗೊಮ್ಮೆ ಕ್ಯಾನ್ಸರ್ ಗಂಟಾಗುತ್ತದೆ.

ಅನೇಕ ಸಿಗರೇಟು ಸೇದುವ ಭಕ್ತರು ಸಿಗರೇಟು ಸೇದುವುದರಿಂದ ಕ್ಯಾನ್ಸರ್ ಬರುವುದಿಲ್ಲ, ವೈದ್ಯರು ಸುಳ್ಳು ಹೇಳುತ್ತಾರೆ ಎಂದು ಸಾರುವರು. ಒಂದೆರಡು ಉದಾಹರಣೆಗಳನ್ನು ಕೊಟ್ಟು ಅವನಿಗೇಕೆ ಆಗಲಿಲ್ಲ, ಇವನಿಗೇಕೆ ಆಗಲಿಲ್ಲ ಎಂದು ಪ್ರಶ್ನಿಸುತ್ತಿದ್ದರು. ಇಂಥವರಿಗೆ ಉತ್ತರಿಸಲೆಂದು ಕೆಲವು ವಿಜ್ಞಾನಿಗಳು ಸಿಗರೇಟು ಸೇದುವ ಯಂತ್ರ ತಯಾರಿಸಿದರು. ಈ ಯಂತ್ರವು ಒಂದೇ ಸಲಕ್ಕೆ ಸುಮಾರು ಎರಡು ಸಾವಿರ ಸಿಗರೇಟು ಸೇದುತ್ತದೆ. ಎರಡು ಸಾವಿರ ಸಿಗರೇಟುಗಳಿಂದ ಬಂದ ಹೊಗೆಯು ಒಂದು ನಳಿಗೆಯಲ್ಲಿ ಸೇರಿ ಮುಂಚಲಿಸಿ, ಒಂದು ದ್ರಾವಣದಲ್ಲಿಂದ ಹೊರಬರುವಂತೆ ಮಾಡುತ್ತಾರೆ. ಹೊಗೆಯು ದ್ರಾವಣದಲ್ಲಿ ಕರಗಿ ಅದರ ತಳದಲ್ಲಿ ಸಿಗರೇಟಿನ ಹೊಗೆಯ ಡಾಂಬರ ತಯಾರಾಗುತ್ತದೆ. ಈ ಡಾಂಬರವನ್ನು ಶೇಖರಿಸಿ ಇಡುವರು. ಪ್ರಯೋಗಕ್ಕೊಳಗಾಗುವ ಪ್ರಾಣಿಗಳ ಚರ್ಮದ ಮೇಲೆ ಇದನ್ನು ಸವರುತ್ತ ಹೋದರೆ ಕೆಲವು ದಿನಗಳಲ್ಲಿ ಪ್ರಾಣಿಯ ಚರ್ಮದಲ್ಲಿ ಕ್ಯಾನ್ಸರ್ ಮೂಡುತ್ತದೆ. ಈ ಪ್ರಯೋಗ ನಡೆದ ಮೇಲೆ ಎಲ್ಲರ ಬಾಯಿಗಳೂ ಮುಚ್ಚಿಹೋದವು.

ಜಗತ್ತಿನ ವೈದ್ಯರು ಹಾಗು ವಿಜ್ಞಾನಿಗಳು ಇಂದು ತಂಬಾಕು ಕ್ಯಾನ್ಸರ್ ಜನಕ, ಸಿಗರೇಟು ಶ್ವಾಸನಾಳದ ಕ್ಯಾನ್ಸರ್ ಹುಟ್ಟಿಸುವುದು ಎಂದು ದೃಢವಾಗಿ ನಂಬಿದ್ದಾರೆ.

ಇದೇ ಮಾತನ್ನು ನಾವು ಚುಟ್ಟಾ ಸೇವನೆಗೂ ಹೇಳಬಹುದು. ಚುಟ್ಟಾಗಳಲ್ಲೂ ತಂಬಾಕು ಬಹಳ ಇರುತ್ತದೆ. ಸಿಗರೇಟು ಸೇದಿದರೆ ಬರುವಂಥ ಶ್ವಾಸನಾಳದ ಕ್ಯಾನ್ಸರ್ ಇವರಿಗೂ ಬರುವುದು.

ಚಟಗಳು ಕ್ಯಾನ್ಸರ್ ಬರಲು ಕಾರಣವಾಗುವಂತೆ ಕೆಲವೊಂದು ರೂಢಿಗಳೂ ಸಹ ಕ್ಯಾನ್ಸರ್ ಹುಟ್ಟಿಗೆ ಕಾರಣವಾಗುತ್ತವೆಂಬುದು ತಿಳಿದು ಬಂದಿದೆ. ಅವುಗಳಲ್ಲಿ ಕೆಲವು ಪ್ರಮುಖವಾದ ರೂಢಿಗಳನ್ನು ಪರಿಶೀಲಿಸೋಣ.

ಸೊಂಟದಲ್ಲಿ ಹುಟ್ಟುವ ಕ್ಯಾನ್ಸರ್

ಹಳ್ಳಿಗಳಲ್ಲಿ ಸ್ತ್ರೀ-ಪುರುಷರು ಧೋತರ ಅಥವಾ ಸೀರೆಗಳನ್ನು ಸೊಂಟಕ್ಕೆ ಬಹು ಬಿಗಿಯಾಗುವಂತೆ ಕಟ್ಟುವರು. ಈ ಕಟ್ಟುವಿಕೆಯು ಚರ್ಮವನ್ನು ಕೊರೆದು ಅಲ್ಲಿ ಗಾಯಮಾಡುತ್ತದೆ. ಈ ಗಾಯವು ದೀರ್ಘಕಾಲದವರೆಗೆ ಉಳಿದರೆ ಅದರಲ್ಲಿ ಕ್ಯಾನ್ಸರ್ ಬೆಳೆದುಕೊಳ್ಳುವುದು. ಇಂಥ ಕ್ಯಾನ್ಸರ್‌ಗಳನ್ನು ಸೀರೆ ಅಥವಾ ಧೋತ್ರದ ಕ್ಯಾನ್ಸರ್ ಎಂದು ಕರೆಯುವರು.

ಹಳ್ಳಿಗರಿಗೆ ತಿಳುವಳಿಕೆ ಕೊಟ್ಟು ಸೊಂಟದ ಬಟ್ಟೆಯನ್ನು ಅಷ್ಟು ಬಿಗಿಯಾಗಿ ಕಟ್ಟಬಾರದೆಂದು ಹೇಳಬೇಕು.

ಕಾಶ್ಮೀರದ ಕಂಗ್ರಿ ಮತ್ತು ಕ್ಯಾನ್ಸರ್

ಕಾಶ್ಮೀರದಲ್ಲಿ ಉಗ್ರವಾದ ಚಳಿಯು ಹಲವಾರು ತಿಂಗಳುಗಳವರೆಗೆ ಇರುತ್ತದೆ. ಅಲ್ಲಿಯ ಜನರು ತಮ್ಮನ್ನು ಈ ಚಳಿಯಿಂದ ಸಂರಕ್ಷಿಸಿಕೊಳ್ಳಲು ಕಂಗ್ರಿ ಎಂಬ ಹೆಸರಿನ ಅಗ್ಗಿಷ್ಟಿಕೆಯನ್ನು ಬಳಸುವರು. ಕಂಗ್ರಿಯಲ್ಲಿ ಬೆಂಕಿ ಮಾಡಲು ಚಿನಾರ ಎಂಬ ಮರದ ಒಣ ಎಲೆಗಳನ್ನು ಸುಡುವರು. ಈ ಎಲೆಗಳನ್ನು ಸುಡುವಾಗ ಹೊರಡುವ ಹೊಗೆಯಲ್ಲಿ ಹಲವು ಕ್ಯಾನ್ಸರ್‌ಕಾರಕ ಘಟಕಗಳಿರುತ್ತವೆ. ಎಲೆಗಳು ಸುಡುವಾಗ ಕಿಡಿಗಳೆದ್ದು ಚರ್ಮವನ್ನು



ಸೊಂಟದ ಕ್ಯಾನ್ಸರ್

ಸುಡುವವು. ಚರ್ಮದಲ್ಲಿ ಸುಟ್ಟ ಗಾಯಗಳಾಗುವವು. ಈ ಗಾಯಗಳ ಮೇಲೆ ಚಿನಾರ ಎಲೆಯ ಹೊಗೆಯು ಆಡಿ ಅಲ್ಲಿ ಕ್ಯಾನ್ಸರ್ ಹುಟ್ಟುವಂತೆ ಮಾಡುವುದು. ಈ ಕ್ಯಾನ್ಸರ್‌ಅನ್ನು ಕಂಗ್ರಿ ಕ್ಯಾನ್ಸರ್ ಎಂದೇ ಜನರು ಕರೆಯುತ್ತಾರೆ.

ಕಾಶ್ಮೀರಿಗಳಿಗೆ ಈ ವಿವರಗಳನ್ನು ತಿಳಿಸಿ ಉಪದೇಶಿಸಿದರೆ ಆ ಮುಗ್ಧ ಜನರು ಕ್ಯಾನ್ಸರ್‌ದಿಂದ ಮುಕ್ತರಾಗಬಹುದು.

ಸುನತಿ ಮತ್ತು ಶಿಶ್ನದ ಕ್ಯಾನ್ಸರ್

ಶಿಶ್ನದ ಕ್ಯಾನ್ಸರ್ ಇಡೀ ಜಗತ್ತಿನಲ್ಲಿ ಹಿಂದುಸ್ತಾನದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಭಾರತದಲ್ಲಿಯೇ ನೋಡಿದರೆ ಹಿಂದುಗಳಲ್ಲಿ ಅತಿ ಹೆಚ್ಚು. ಮುಸ್ಲಿಮರಲ್ಲಿ ಕಾಣುವುದೇ ಇಲ್ಲ. ಇದು ಯಾಕೆ? ಈ ಕ್ಯಾನ್ಸರ್ ಹಿಂದುಗಳಲ್ಲಿ ಯಾಕೆ ಹೆಚ್ಚು?

ಮುಸ್ಲಿಮರಲ್ಲಿ ಯಾಕೆ ಕಡಿಮೆ? ಈ ಪ್ರಶ್ನೆಗೆ ಉತ್ತರ ಹುಡುಕಿದರೆ ಅಚ್ಚರಿ ಎನಿಸಬಹುದು. ಉತ್ತರ ಎಂದರೆ ಮುಸ್ಲಿಮರು ಬಾಲಕರಿದ್ದಾಗ ಸುನತಿ ಮಾಡಿಸಿಕೊಳ್ಳುವರು. ಹಿಂದುಗಳಲ್ಲಿ ಸುನತಿ ಪದ್ಧತಿ ಇಲ್ಲ. ಸುನತಿ ಮಾಡಿಸುವುದರಿಂದ ಶಿಶ್ನದ ಮುಂಭಾಗದ ಮೇಲಿನ ಚರ್ಮ ಇರುವುದಿಲ್ಲ. ಕಾರಣ ಶಿಶ್ನದ ಸುತ್ತಲೂ ಹಿಪ್ಪೆಯಂಥ ಬಿಳಿ ಪದಾರ್ಥ ಶೇಖರಗೊಳ್ಳುವುದಿಲ್ಲ.

ಅದರೆ ಹಿಂದುಗಳಲ್ಲಿ ಸುನತಿ ಮಾಡಿಸುವ ಪದ್ಧತಿ ಇರದ ಕಾರಣ ಶಿಶ್ನದ ಮುಂಭಾಗದ ಚರ್ಮವು ಉಳಿದುಕೊಂಡು ಶಿಶ್ನದ ಮುಂಭಾಗದ ಸುತ್ತಲೂ ಒಂದು ತ್ವಚೆಯ ಚೀಲವನ್ನೇ ನಿರ್ಮಿಸುತ್ತದೆ. ಈ ಚೀಲದ ಒಳಗೆ ಹಿಪ್ಪೆಯಂಥ ಪದಾರ್ಥ ಶೇಖರಗೊಳ್ಳುವುದು. ಅದಕ್ಕೆ ಉಗ್ರ ವಾಸನೆ ಬರುವುದು. ಸಾವಧಾನವಾಗಿ ಈ ಹಿಪ್ಪೆಯಂಥ ಪದಾರ್ಥ ಶಿಶ್ನವನ್ನು ಗಾಯಗೊಳಿಸುತ್ತದೆ. ಗಾಯದ ಮೇಲೆ ಹಿಪ್ಪೆಯಂಥ ಪದಾರ್ಥ ತನ್ನ ಪ್ರಭಾವವನ್ನು ಬೀರಿ ಅಲ್ಲಿ ಕ್ಯಾನ್ಸರ್ ಹುಟ್ಟಿಸುವುದು.

ಸುನತಿ ಮುಸ್ಲಿಮರ ಪದ್ಧತಿಯಾಗಿದ್ದರೂ, ವೈಜ್ಞಾನಿಕವಾಗಿ ಶಿಶ್ನದ ಕ್ಯಾನ್ಸರ್ ಅನ್ನು ತಡೆಯುತ್ತದೆ. ಕಾರಣ ಇಂದು ಅನೇಕ ಹಿಂದುಗಳೂ ಸಹ ಸುನತಿ ಪದ್ಧತಿ ಒಪ್ಪಿಕೊಂಡು ತಾವು ಸುನತಿ ಮಾಡಿಸಿಕೊಳ್ಳುವರು. ಹಾಗು ತಮ್ಮ ಮಕ್ಕಳಿಗೂ ಮಾಡಿಸುತ್ತಿರುವರು. ಇದು ಬಹು ಒಳ್ಳೆಯ ಬೆಳವಣಿಗೆ ಎಂದೇ ಹೇಳಬೇಕು. ಸುನತಿ ಮಾಡಿಸಲು ಮನಸ್ಸು ಇರದೇ ಇದ್ದವರು ಶಿಶ್ನದ ಮುಂಭಾಗವನ್ನು ದಿನಾಲು ಸ್ನಾನ ಮಾಡುವಾಗ ಸೋಪು ಹಚ್ಚಿ ತಿಕ್ಕಿ ನಿರ್ಮಲಗೊಳಿಸಬೇಕು. ಇಲ್ಲವಾದರೆ ಕ್ಯಾನ್ಸರ್ ರೋಗಕ್ಕೆ ಆಮಂತ್ರಣ ಕೊಟ್ಟಂತೆಯೇ ಸರಿ. ಇವುಗಳಲ್ಲದೆ ದೇಹದಲ್ಲಿ ಇನ್ನೂ ಹಲವಾರು ಪ್ರಕಾರದ ವಿವಿಧ ಕಾರಣಗಳಿಂದ ಕ್ಯಾನ್ಸರ್ ಕಾಣಬಹುದು. ಅವೆಲ್ಲವುಗಳನ್ನೂ ಈ ಚಿಕ್ಕ ಹೊತ್ತಿಗೆಯಲ್ಲಿ ಸೇರಿಸಲು ಸಾಧ್ಯವಾಗುವುದಿಲ್ಲ.

ಆಹಾರ ಮತ್ತು ಕ್ಯಾನ್ಸರ್

ಆಹಾರದಲ್ಲಿ ನಾವು ಹಲವಾರು ಕ್ಯಾನ್ಸರ್ ಜನಕ ವಸ್ತುಗಳನ್ನು ಸೇವಿಸುತ್ತೇವೆ. ಇವುಗಳು ಅನ್ನನಾಳ, ಜಠರಗಳ ಮೇರೆ ತಮ್ಮ ಕುಪ್ರಭಾವ ಬೀರಿ ಕ್ಯಾನ್ಸರ್ ರೋಗ ಬರಲು

ಕಾರಣವಾಗುತ್ತವೆ. ಉದಾಹರಣೆಗೆ ಇಲ್ಲಣ, ಕಲುಷಿತ ರೊಟ್ಟಿ, ಉಪ್ಪು ಹಚ್ಚಿ ಒಣಗಿಸಿದ ಮೀನು, ಕಹಿಸೇಂಗಾ (ಬೂರಸು ಬರುವುದರಿಂದ ಸೇಂಗಾ ಕಹಿ ಆಗುತ್ತವೆ) ಮುಂತಾದವುಗಳು. ಕಹಿ ಸೇಂಗಾದಲ್ಲಿ ಒಂದು ಬಗೆಯ ವಿಷಕಾರಕ ಪದಾರ್ಥ ಇರುತ್ತದೆ. ಇದು ಯಕೃತ ಕ್ಯಾನ್ಸರಿಗೆ ಮುಖ್ಯ ಕಾರಣ. ಇಂಥ ಸೇಂಗಾ ಹಾಕಿ ಮಾಡಿದ ಚಟ್ನಿ, ಪಲ್ಯೆ, ಇಂಥ ಸೇಂಗಾದಿಂದ ತೆಗೆದ ಎಣ್ಣೆಯಲ್ಲಿ ಕರಿದ ಪದಾರ್ಥಗಳಲ್ಲಿ ಈ ವಿಷ ಇರುತ್ತದೆ. ಸೇಂಗಾ ಎಣ್ಣೆಯ ತಳದಲ್ಲಿ ಉಳಿಯುವ ಗಸಿಯಲ್ಲಿ (ರಾಡಿಯಂಥ ಎಣ್ಣೆ) ಈ ವಿಷವು ಬಹಳವಿರುತ್ತದೆ. ಇದನ್ನು ತಿಂದವರಿಗೆ ಕ್ಯಾನ್ಸರ್ ಬರುವುದು ಖಚಿತ.

ಇನ್ನೊಂದು ವಿಧದಲ್ಲಿ ಕ್ಯಾನ್ಸರ್ ಕಾಣಬಹುದು. ಆಹಾರದಲ್ಲಿ ತೌಡಿನ ಕೊರತೆಯಾಗಿ ಅದರಿಂದ ಮಲಬದ್ಧತೆ ತೋರಿ, ಮಲಬದ್ಧತೆಯಿಂದ ಮಲದಲ್ಲಿ ಹಲವಾರು ಕ್ಯಾನ್ಸರ್ ಕಾರಕ ಘಟಕಗಳು ಹುಟ್ಟಿ ಅವು ದೊಡ್ಡ ಕರುಳು ಹಾಗು ಗುದದ ಲೋಳ್ಪರೆಗಳ ಮೇಲೆ ಕುಪ್ರಭಾವ ಬೀರಿ ಆ ಭಾಗದಲ್ಲಿ ಕ್ಯಾನ್ಸರ್ ಹುಟ್ಟಿಸುವವು.

ಕ್ಯಾನ್ಸರ್ ರೋಗದ ಸೂಚನೆಗಳು

೧. ದೀರ್ಘಕಾಲದವರೆಗೆ ಮಾಯದ ಗಾಯಗಳು.

೨. ನೋವು ಕಾಣಿಸಿದ, ರಕ್ತ ಒಸರುವ, ಬೇಗನೆ ದೊಡ್ಡದಾಗುತ್ತಿರುವ ಮಚ್ಚೆಗಳು.

೩. ಮಲದಲ್ಲಿ ರಕ್ತ ಸೋರುವಿಕೆ.

೪. ಮುದುಕರಲ್ಲಿ ಬಹಳ ಕಾಲದವರೆಗೆ ಉಳಿಯುವ ಕೆಮ್ಮು, ಕಫದಲ್ಲಿ ರಕ್ತ.

೫. ಮುಟ್ಟು ನಿಂತ ಮೇಲೆ ಬಿಳಿಸೆರಗು ಪ್ರಾರಂಭ.

೬. ಮುಟ್ಟು ನಿಂತು ಮತ್ತೆ ರಕ್ತಸ್ರಾವ ಪ್ರಾರಂಭ.

೭. ವಿನಾಕಾರಣ ಸೊರಗುವಿಕೆ. ಅಶಕ್ತತೆ, ಹಸಿವು ಕುಂದುವಿಕೆ.

೮. ಚಿಕ್ಕ ಮಕ್ಕಳ ಕಣ್ಣಿನಲ್ಲಿ ಬಿಳಿಯ ಗೊಂಬೆ.



ಮೊಲೆಯ ಕ್ಯಾನ್ಸರ್

೯. ಮೊಲೆಯಲ್ಲಿ ಗಂಟು ಬೆಳೆಯುವುದು. ಮೊಲೆಯಿಂದ ರಕ್ತ ಒಸರುವಿಕೆ.

೧೦. ಗಂಡಮಾಲೆ ಗಂಟುಗಳು ದೊಡ್ಡದಾಗುವಿಕೆ.

೧೧. ಒಂದೇ ಕಡೆಯ ತರಡುಬೀಜ ದೊಡ್ಡದಾಗುವಿಕೆ.

೧೨. ಶಿಶ್ನದ ಮೇಲೆ ಬಿರುಸಾದ ಮಚ್ಚೆಗಳು ಹುಟ್ಟುವುದು.

೧೩. ನಾಲಿಗೆ ಹಾಗು ಬಾಯಿಯಲ್ಲಿ ಬಿಳಿಯ ಮಚ್ಚೆಗಳು.

೧೪. ಧ್ವನಿಯ ಬದಲಾವಣೆ.

೧೫. ನುಂಗುವಾಗ ಆಗುವ ಗಂಟಲ ತಡೆ.

೧೬. ಮುದುಕರಲ್ಲಿ ರಕ್ತವಾಂತಿ ಮುಂತಾದವುಗಳು.

೧೭. ನೋವು ರಹಿತ ರಕ್ತ ಮೂತ್ರ.

೧೮. ಕಾಮಾಲೆ.

ಮೇಲಿನ ಸೂಚನೆಗಳನ್ನು ಜನರು ಲಕ್ಷ್ಯದಲ್ಲಿ ಇಡಬೇಕು. ಇವುಗಳಲ್ಲಿ ಏನಾದರೂ ಕಂಡು ಬಂದರೆ ತಕ್ಷಣವೇ ವೈದ್ಯರ ಬಳಿಹೋಗಿ ಪರೀಕ್ಷಿಸಿಕೊಳ್ಳಬೇಕು. ತಡಮಾಡಿದರೆ ತೊಂದರೆ ಹೆಚ್ಚಾಗುವುದು.

ಕರ್ನಾಟಕದಲ್ಲಿ ಕ್ಯಾನ್ಸರ್ ರೋಗ ನಿವಾರಿಸಲು ಹಾಗು ಕ್ಯಾನ್ಸರ್ ರೋಗಿಗಳನ್ನು ಉಪಚರಿಸಲು ಎರಡು ಪ್ರಮುಖ ಕೇಂದ್ರಗಳಿವೆ. ಒಂದು ಬೆಂಗಳೂರಿನಲ್ಲಿ ಇರುವ ಕಿದ್ವಾಯಿ ಮೆಮೋರಿಯಲ್ ಆಸ್ಪತ್ರೆ ಬಹು ದೊಡ್ಡದು. ಎರಡನೆಯದು ಹುಬ್ಬಳ್ಳಿಯಲ್ಲಿ ಇರುವ ಕರ್ನಾಟಕ ಕ್ಯಾನ್ಸರ್ ಉಪಚಾರ ಹಾಗು ಸಂಶೋಧನಾ ಕೇಂದ್ರ. ಈ ಎರಡೂ ಕೇಂದ್ರಗಳಲ್ಲಿ ನುರಿತ ವೈದ್ಯರಿದ್ದಾರೆ. ಶಸ್ತ್ರಕ್ರಿಯೆ, ಔಷಧೋಪಚಾರ, ವಿಕಿರಣ ಚಿಕಿತ್ಸೆ ಮುಂತಾದ ವಿಧಾನಗಳಿಂದ ರೋಗಿಗಳನ್ನು ಉಪಚರಿಸುವರು.

ಕ್ಯಾನ್ಸರ್ ರೋಗವನ್ನು ಪ್ರಾರಂಭದ ಹಂತದಲ್ಲಿಯೇ ಗುರುತಿಸಲು ಈ ಕೇಂದ್ರಗಳಲ್ಲಿ ಹಲವಾರು ವಿಧಾನಗಳನ್ನು ಬಳಿಸಿಕೊಳ್ಳುತ್ತಲಿರುವರು. ಎರಡೂ ಕೇಂದ್ರಗಳಲ್ಲಿ ಧರ್ಮಶಾಲೆಗಳಿದ್ದು ಜನರಿಗೆ ತಂಗಲು ಅನುಕೂಲವಿದೆ, ಕೆಲವು ದಾನಿಗಳ ಪ್ರಯತ್ನದಿಂದ ರೋಗಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನೂ ಮಾಡಿರುವರು.

ಮುನ್ನೆಚ್ಚರಿಕೆಯ ಉಪಾಯಗಳು

ಮುನ್ನೆಚ್ಚರಿಕೆಯ ಉಪಾಯಗಳೆಂದರೆ ಈ ಕೆಳಗಿನ ಕ್ರಮಗಳನ್ನು ಬಳಸುವದರಿಂದ ಕ್ಯಾನ್ಸರ್ ರೋಗ ಬರುತ್ತಿರುವಾಗಲೇ ಸುಳಿವು ಹತ್ತುವುದು. ಈ ಸುಳಿವಿನ ಆಧಾರದ ಮೇಲೆ ಉಪಚಾರ ಮಾಡಿದರೆ ಕ್ಯಾನ್ಸರ್ ರೋಗದಿಂದ ಮುಕ್ತರಾಗಬಹುದು. ಇಲ್ಲದೆ ಹೋದರೆ ಕ್ಯಾನ್ಸರ್ ರೋಗವು ಎಲ್ಲ ಕಡೆಗೂ ಹಬ್ಬಿ ವೈದ್ಯರ ಯಾವ ಆಟಗಳು ನಡೆಯದಂತೆ ಆಗುವುದು.

ಮೈಮೇಲಿರುವ ಮಚ್ಚೆಗಳು, ಅಥವಾ ಕಪ್ಪು ಚುಕ್ಕೆಗಳು ಕ್ಯಾನ್ಸರ್ ರೂಪಕ್ಕೆ ತಿರುಗಬಹುದು. ಇಂಥ ಚುಕ್ಕೆಗಳನ್ನು ಪಡೆದವರು ಲಕ್ಷ್ಯವಹಿಸಿ ಅವುಗಳನ್ನು ನೋಡುತ್ತಿರಬೇಕು. ಅವುಗಳಲ್ಲಿ ತುರಿಕೆ ಹುಟ್ಟಿದರೆ, ಅವು ಗಾತ್ರದಲ್ಲಿ ಬೆಳೆಯುತ್ತಿದ್ದರೆ ಅವುಗಳೊಳಗೆ ಹೊಸ ರಕ್ತ ವಾಹಿನಿಗಳು ಮೂಡಿದರೆ ಅದು ಅಪಾಯ. ಆದ್ದರಿಂದ ಹೀಗೇನಾದರೂ ಕಂಡರೆ ರೋಗಿಗಳು ತಕ್ಷಣ ವೈದ್ಯರನ್ನು ಕಂಡು ಪರೀಕ್ಷಿಸಿಕೊಳ್ಳಬೇಕು.

ಎರಡನೆಯ ಕ್ರಮವೆಂದರೆ ಸ್ತ್ರೀಯರು ತಮ್ಮ ಮೊಲೆಗಳನ್ನು ಮೇಲಿಂದ ಮೇಲೆ ಪರೀಕ್ಷಿಸಿಕೊಳ್ಳುತ್ತಿರಬೇಕು. ಮೊಲೆಗಳಲ್ಲಿ ಏನಾದರೂ ಗಂಟುಕಂಡರೆ, ಮೊಲೆಯ ತೊಟ್ಟಿನಿಂದ ರಕ್ತಮಿಶ್ರಿತ ಸ್ರವಿಕೆ ಕಂಡರೆ ವೈದ್ಯರ ಸಲಹೆ ಪಡೆಯಬೇಕು.

ಸ್ತ್ರೀಯರನ್ನು ದೊಡ್ಡ ಸಂಖ್ಯೆಯಲ್ಲಿ ಕೊಲ್ಲುವ ಇನ್ನೊಂದು ಕ್ಯಾನ್ಸರ್ ಎಂದರೆ ಗರ್ಭಾಶಯದ ಕುತ್ತಿಗೆಯ ಕ್ಯಾನ್ಸರ್. ಇದನ್ನು ಬೇಗನೆ ಪತ್ತೆ ಹಚ್ಚಬೇಕಾದರೆ ಸ್ತ್ರೀಯರು (ಮೂವತ್ತು ವರ್ಷಕ್ಕಿಂತ ಮೇಲ್ಪಟ್ಟ) ಪ್ರತಿ ಆರು ತಿಂಗಳಿಗೊಮ್ಮೆ ವೈದ್ಯ ಪರೀಕ್ಷೆಗೆ ಒಳಪಡಬೇಕು. ಗರ್ಭಾಶಯದ ಕುತ್ತಿಗೆಯಿಂದ ಕಳಚಿ ಬೀಳುವ ಜೀವಕಣಗಳ ಪರೀಕ್ಷೆ ಮಾಡಿಸಬೇಕು.

ಇದೇ ರೀತಿ ದೀರ್ಘಕಾಲದಿಂದ ತಂಬಾಕು ಸೇದುವವರು ಸಹ ತಮ್ಮ 'ಕಫ' ಪರೀಕ್ಷೆ ಪ್ರತಿ ಆರು ತಿಂಗಳಿಗೊಮ್ಮೆ ಮಾಡಿಸಬೇಕಾಗುತ್ತದೆ.

ಕಫದಲ್ಲಿ ಕಳಚಿ ಬೀಳುವ ಜೀವಕಣಗಳನ್ನು ಪರೀಕ್ಷಿಸಿ ಕ್ಯಾನ್ಸರ್ ರೋಗದ ಇರವನ್ನು ಬೇಗನೆ ಪತ್ತೆ ಹಚ್ಚಲು ಸಾಧ್ಯ.

ಒಟ್ಟಿನಲ್ಲಿ ಕ್ಯಾನ್ಸರ್ ರೋಗದ ಖಚಿತ ಕಾರಣಗಳು ಗೊತ್ತಿರದಿದ್ದರೂ ಕೆಲವೊಂದು ಸಂಗತಿಗಳು ಕ್ಯಾನ್ಸರ್ ರೋಗವನ್ನು ಬೇಗನೆ ಪ್ರಕಟಗೊಳಿಸಬಲ್ಲವು ಎಂಬುದು ತಿಳಿದಿದೆ. ನಾವು ಅಂಥ ಸಂಗತಿಗಳಿಂದ ದೂರವಿದ್ದರೆ ಒಳ್ಳೆಯದು. ಕ್ಯಾನ್ಸರ್‌ಕಾರಕ ಸಂಗತಿಗಳನ್ನು ದೂರವಿಡುವುದು ಸಾಧ್ಯವಾಗದೇ ಹೋದರೆ ಮುನ್ನೆಚ್ಚರಿಕೆ ಕ್ರಮಗಳನ್ನು ಲಕ್ಷ್ಯದಲ್ಲಿಡಬೇಕು. ರೋಗದ ಪ್ರಾರಂಭದಲ್ಲಿಯೇ ಚಿಕಿತ್ಸೆ ಪಡೆದರೆ ರೋಗ ಹದ್ದಿನಲ್ಲಿ ಉಳಿಯುವುದು. ಇವೆಲ್ಲವುಗಳನ್ನು ನಾವು ನಿರ್ಲಕ್ಷಿಸಿದರೆ ನಮ್ಮ ಜೀವವನ್ನು ಒಯ್ದು ಕ್ಯಾನ್ಸರ್ ರೋಗದ ಬಾಯಿಯಲ್ಲಿ ಸೇರಿಸಿದಂತೆ ಆಗುವದು.

❋ ❋ ❋

AKSHARA GRANTHALAYA
ACC.NO. 016143

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ಗ್ರಂಥಾಲಯ

ಪರಿಗ್ರಹಣ ಸಂಖ್ಯೆ 016143

ವರ್ಗೀಕರಣ ಸಂಖ್ಯೆ 374 NAG

ಪುಸ್ತಕವನ್ನು ಕೊನೆಯಲ್ಲಿ ನಮೂದಿಸಲಾಗಿರುವ ದಿನದಂದು ಅಥವಾ ಅದಕ್ಕೆ ಮುನ್ನ ಹಿಂದಿರುಗಿಸಬೇಕು. ತಡವಾದ ಪ್ರತಿದಿನಕ್ಕೆ ನಿಯಮಾನುಸಾರ ದಂಡ ಶುಲ್ಕ ವಿಧಿಸಲಾಗುವುದು.

ಕನ್ನಡ ವಿಶ್ವವಿ ... ತ್ತಮ
ಹಾಗೂ ಉಪ ... ರಚನಾ
ವಿಭಾಗ'ವನ್ನು ... ರಚನೆ
ಮಾಡಬೇಕೆಂದ ... ರಿಗಾಗಿ
ಪುಸ್ತಕ ಬರೆಸು ... ಟ್ಟರು.
ವಿಶ್ವವಿದ್ಯಾಲಯ ... ರನ್ನು,
ಭಾಷಾತಜ್ಞರನ ... ಕ್ರಿಯ,
ಸಲಹೆ, ಸಹಕಾ ... ನ್ಯಾಸ,
ಚಿತ್ರಗಳ ಮಾ ... ರ್ಚಿಸಿ
ಯೋಜನೆಯ ...

ನವಸಾಕ್ಷರರಿಗ ... ಗಿರುವ
ಪುಸ್ತಕಗಳನ್ನೆಲ್ಲ ... ಕ್ಕರಿಂದ
ಪರಿಶೀಲಿಸಲಾ ... ವರಿಗೆ
ಕಮ್ಮಟಗಳನ್ನು ... ಜಿಲ್ಲೆ,
ತಾಲೂಕುಗಳಿ ... ಅದರ
ಗುಣದೋಷಗ ... ಯದ
ಗಣಕಯಂತ್ರ ... ಡಿದ್ದ
ಮಾಹಿತಿಗಳನ್ನೆ ... ಯದ
ಆದ್ಯತೆಗಳನ್ನು ... ನಮ್ಮ
ವಿಶ್ವವಿದ್ಯಾಲ ... ಟ್ಟರು.
ಕಲಾವಿದರು ... ಗಳನ್ನು
ನವಸಾಕ್ಷರರ ... ಗಳನ್ನು
ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು